## ಇಲ್ಲಿಯವರೆಗೆ



ಮಿಜ್ರಾಡಿನ್ ಎಂಬ ಮನುಷ್ಯ ಬಿನ್‌ಲಾಡೆನ್ ಅಷ್ಟೇ ಕ್ರೂರಿ. ಆತ ಅವನ ಅಪ್ಪನ ಮೇಲೆ ಸೇಡು ತೀರಿಸಿಕೊಳ್ಳುವ ಹುನ್ನಾರದಲ್ಲಿರುತ್ತಾನೆ. ಆತನನ್ನು 10 ಟೀಮ್‌ಗಳಲ್ಲಿ ಹುಡುಕಲಾಗುತ್ತದೆ. ಆತ ಹಾವಿನಂಥವನು. ಕೈಗೆ ಸಿಗದೆ ಜಾರಿಕೊಳ್ಳುವವನು. ಈ ಮಧ್ಯೆ ಸ್ಯಾಡಿಸ್ಟ್ ಪ್ರೇಮ್‌ಜಿತ್ ಹೆಣ್ಣು ಮಕ್ಕಳನ್ನು ಅಸಭ್ಯವಾಗಿ ಕಾಣುತ್ತಾನೆ. ಅವನು ಪ್ರತಿ ಸಂಜೆ ದೇವಸ್ಥಾನಕ್ಕೆ ಹೋಗುತ್ತಾನೆ. ದೇವರಿಗಾಗಿಯಲ್ಲ, ಸ್ತ್ರೀಯರಿಗಾಗಿ! ಶರ್ಟ್, ಜೀನ್ಸ್ ಧರಿಸಿರುವ ಹುಡುಗಿಯರೆಂದರೆ ಅವನಿಗೆ ಇಷ್ಟವಿಲ್ಲ. ಮದುವೆಯಾದ ಹೆಂಗಸರೆಂದರೆ ಇಷ್ಟ. ಸಂಪ್ರದಾಯಬದ್ಧವಾಗಿ ಸೀರೆ ಉಟ್ಟು, ದೇವರ ಮುಂದೆ ಬಾಗಿ ತೀರ್ಥ ತೆಗೆದುಕೊಳ್ಳುತ್ತಿರುವ ಹೆಂಗಸರನ್ನು ಹಿಂದುಗಡೆಯಿಂದ ನೋಡುವುದು ಅವನಿಗೆ ಇನ್ನೂ ಇಷ್ಟ.ಇದು ಆತನ ಕೆಟ್ಟ ಮನಸ್ಥಿತಿಯನ್ನು ಬಿಂಬಿಸುತ್ತದೆ.
ಎಂದೋ ನಡೆದ ಸಣ್ಣ ಘಟನೆ ಬದುಕಿನಲ್ಲಿ ಒಂದು ದೊಡ್ಡ ಬದಲಾವಣೆಗೆ ಮೂಲ ಕಾರಣ ಆಗುವುದಕ್ಕೆ 'ಬಟರ್ ಫ್ಲೈ ಎಫೆಕ್ಟ್' ಎನ್ನುತ್ತಾರೆ. 'ನಿಮ್ಮ ಇನ್ವೆಸ್ಟಿಗೇಷನ್ ಎಲ್ಲಿಯವರೆಗೆ ಬಂತು?' ಎಂದು ಕಲ್ಯಾಣಿ ಕೇಳುತ್ತಾಳೆ. ಎಲ್ಲ ರಾಜ್ಯಗಳ ಆಂಟೀ ಟೆರರಿಸ್ಟ್ ಸ್ಕ್ವಾಡ್ ಆಫೀಸ್‌ಗಳಿಗೆ ಮಿಜ್ರಾಡಿನ್‌ನ ಫೋಟೋ ಕಳಿಸಿದ್ದೇವೆ' ಎಂದು ಹೇಳುತ್ತಾನೆ ಕೃಷ್ಣ.

ಮಾರನೆಯ ದಿನ ಕೃಷ್ಣ ಎಲ್ಲ ವಿವರಗಳನ್ನು ಸಂಗ್ರಹಿಸುತ್ತಾನೆ. ಮಿಜ್ರಾಡಿನ್ ಅಲ್ಲಿಗೆ ಹೋದ ಸಮಯದಲ್ಲಿ ಕೊಲೆ ನಡೆದಿರಬಹುದು ಎಂಬ ಎಣಿಕೆ ಹಾಕುತ್ತಾರೆ. ಆ ವಿವರಗಳನ್ನು ತಿಳಿಯಬೇಕೆಂದರೆ, ಮಿಜ್ರಾಡಿನ್‌ಗೂ ಅವಳಿಗೂ ಯಾವ ಸಂಬಂಧ ಎಂದು ತಿಳಿದುಕೊಳ್ಳಬೇಕು. ಅವನು ಅವಳ ಮನೆಗೇಕೆ ಹೋದ? ಆ ಹುಡುಗನಿಗಾಹಿಯೇ? ಬಾಂಬ್ ಬ್ಲಾಸ್ಟ್ ಮಾಡಿದ ಕಾಶ್ಮೀರೀ ಯುವಕ. ಇವನೇನಾ?' ಎಂದು ಕೆಲಕ್ಷಣ ಯೋಚಿಸಿ 'ಅವಳ ಫೋನ್ ನಂಬರ್‌ಗಳ ಮೂಲಕ ಬಾಯ್ ಫ್ರೆಂಡ್ಸ್ ಲಿಸ್ಟ್ ಸಂಪಾದಿಸಬೇಕು. ಅವರ ಫೋಟೋಗಳನ್ನು ಆಟೋ ಡ್ರೈವರ್‌ಗೆ ತೋರಿಸಿದರೆ ಅವನು ಗುರುತು ಹಿಡಿಯಬಹುದು. ಇದು ದೊಡ್ಡ ಪ್ರೋಸೆಸ್. ಆದರೆ ನಿಮ್ಮ ಇನ್‌ಫ್ಲುಯೆನ್ಸ್ ಬಳಸಿ ಒಂದೆರಡು ದಿನದಲ್ಲಿ ಆಗುವ ಹಾಗೆ ನೋಡಬೇಕು' ಎಂದು ಹೇಳುತ್ತಾಳೆ ಕಲ್ಯಾಣಿ.

ಇಷ್ಟು ಸಣ್ಣ ಊರಿನಲ್ಲಿ ಎಷ್ಟಿರಬಹುದು? ಮಹಾ ಅಂದರೆ ಹತ್ತು ಮಂದಿ...'

'ಹತ್ತಲ್ಲ ಸಾರ್..... ಈ ಊರಿನ ಸುಮಾರು ನೂರು ಮಂದಿ ಹುಡುಗರು ಸೈನ್ಯದಲ್ಲಿದ್ದಾರೆ! ಅವರೆಲ್ಲ ಆಗಾಗ ಅವರ ತಂದೆ ತಾಯಿಗೆ ಫೋನ್ ಮಾಡ್ತಾ ಇರ್ತಾರೆ' ಎಂದನು.

ಅಷ್ಟು ನಿರಾಸೆಯಲ್ಲೂ ಅವರಿಗೆ ಆ ಮಾತಿನಿಂದ ಸಂತೋಷವೇ ಆಯ್ತು. ಕಾಶ್ಮೀರ್ ಭಯೋತ್ಪಾದನೆ ವಿರುದ್ಧವಾಗಿ ಕಾಶ್ಮೀರೀ ಯುವಕರೇ ಭಾರತದ ಸೈನ್ಯ ಸೇರಿ ಹೋರಾಡುವುದು!

ಇವನನ್ನು ಎಂದಾದರೂ ನೋಡಿದ್ದೀಯಾ?' ಮಿಜ್ರಾಡಿನ್‌ನ ಫೋಟೋ ತೋರಿಸುತ್ತ ಕೇಳಿದನು ಕೃಷ್ಣ.

ಅವನು ತಲೆ ಅಡ್ಡಡ್ಡ ಆಡಿಸುತ್ತ 'ಇಲ್ಲ ಸರ್' ಎಂದನು.

***

ಅವರು ಮರಳಿ ಡ್ರಾಸ್‌ಗೆ ಬಂದಾಗ ಮಧ್ಯಾಹ್ನವಾಗಿತ್ತು. ಹೆಸರಿಗೆ ಕಾಶ್ಮೀರವಾದರೂ ಬಿಸಿಲು ಸುಡುತ್ತಿತ್ತು. ಹೋಗಿದ್ದ ಊರಿನ ರಸ್ತೆ ತೀರಾ ಹಾಳಾಗಿ ನರಕದರ್ಶನ ಮಾಡಿಸಿತ್ತು. ಸೊಂಟ ನೋವು ತಾಳಲಾಗದೆ ಹೋಟೆಲ್ ತಲುಪಿದ ಕೂಡಲೆ ಮಲಗಿಬಿಟ್ಟಳು. ಕೋಣೆ ಬಹಳ ಸಣ್ಣದು. ಕೃಷ್ಣ ಕುರ್ಚಿಯಲ್ಲಿ ಕುಳಿತಿದ್ದನು. ಐದು ನಿಮಿಷಗಳ ನಂತರ 'ಏನು ಯೋಚಿಸುತ್ತಿದ್ದೀರಿ?' ಎಂದು ಕೇಳಿದನು.

ಬ್ಯಾಂಕ್ ಆಫೀಸರ್‌ನ ಹೆಂಡತಿ ಮಿಜ್ರಾಡಿನ್ ಗೆಳತಿ ಆಗಿದ್ದಿರಬಹುದು. ಅವನು ಸ್ವಂತ ಫೋನ್ ಉಪಯೋಗಿಸುವುದಿಲ್ಲ. ಆದ್ದರಿಂದ ಆ ಊರಿಗೆ ಬಂದಾಗಲೆಲ್ಲ ಅವಳ ಫೋನ್ ಬಳಸಿರಬಹುದು'

'ಹಾಗೆ ಆಗಿರಲಿಕ್ಕಿಲ್ಲ, ಮಿಜ್ರಾಡಿನ್ ಮೇಲಿಂದ ಮೇಲೆ ದಕ್ಷಿಣ ಭಾರತಕ್ಕೆ ಬರುತ್ತಿರಲಿಲ್ಲ. ಆದ್ದರಿಂದ ಅವನು ಅವಳ ಪ್ರಿಯಕರನಾಗಿರಲು ಸಾಧ್ಯವಿಲ್ಲ. ಒಂದು ವೇಳೆ ಅವಳು ಗೆಳತಿಯಾಗಿದ್ದರೂ, ಫೋನ್‌ಗಳ ವಿಷಯದಲ್ಲಿ ಎಚ್ಚರಿಕೆ ತೆಗೆದುಕೊಳ್ಳುವ ಮಿಜ್ರಾಡಿನ್ ತನ್ನ ಅನುಚರರಿಗೆ ಪಬ್ಲಿಕ್ ಫೋನ್‌ನಿಂದ ಕಾಲ್ ಮಾಡುತ್ತಾನೆ ಹೊರತು ತನ್ನ ಗೆಳತಿಯ ಮನೆಯಿಂದ ಅವಳ ಫೋನ್ ಬಳಸಿ ಅದೇಕೆ ಕಾಶ್ಮೀರಕ್ಕೆ ಕರೆ ಮಾಡುತ್ತಾನೆ? ಅವಳು ಟೆರರಿಸ್ಟ್‌ಗಳಿಗೆ ಸಹಾಯ ಮಾಡುವ ಸ್ಲೀಪರ್ ಆಗಿರಬಹುದು'

'ಕರೆಕ್ಟೇ, ಪೊಲೀಸರಾದ್ದರಿಂದ ರ‍್ಯಾಷನಲ್ಲಾಗಿ ಯೋಚಿಸಿದಿರಿ. ನನಗೆ ಅದು ತೋಚಲಿಲ್ಲ'

'ಆದರೆ ಅವಳನ್ನು ಸಾಯಿಸಿದ್ದು ಯಾರು? ಏಕೆ ಸಾಯಿಸಿದರು? ಎಲ್ಲಕ್ಕಿಂತ ಮುಖ್ಯವಾಗಿ, ಅಲ್ಲಿಂದ ಮಿಜ್ರಾಡಿನ್ ಹೊರಟಾಗ ಜೊತೆಗಿದ್ದ ಆ ಹುಡುಗ ಯಾರು?' ಎಂದನು.

ಅವರು ಹಾಗೆ ಮಾತನಾಡುತ್ತಿರುವಾಗ ಕೃಷ್ಣನಿಗೆ ಫೋನ್ ಕಾಲ್ ಬಂದಿತು.

'ಆ ಬ್ಯಾಂಕ್ ಆಫೀಸರ್ ಹೆಂಡತಿಯ ಸ್ನೇಹಿತರ ಲಿಸ್ಟ್ ಸಂಪಾದಿಸಿದ್ದೇವೆ ಸರ್, ಫೋಟೋಗಳು ಕೂಡ' ಎಂದನು ಆ ಬದಿಯಿಂದ ಒಬ್ಬ ಆಫೀಸರ್.

'ಅವುಗಳನ್ನು ಆಟೋ ಡ್ರೈವರ್‌ಗೆ ತೋರಿಸಿ. ಮಿಜ್ರಾಡಿನ್ ಆದಿನ ಕರೆದುಕೊಂಡು ಹೋದ ಯುವಕರ ಅದರಲ್ಲಿ ಇದ್ದಾನೇನೋ ನೋಡಿ'

'ಫೋಟೋಗಳನ್ನು ತೋರಿಸಿದೆವು ಸರ್'

'ಇದ್ದಾನಾ?'

'ಇದ್ದಾನೆ'

ಕೃಷ್ಣ ಉಸಿರು ಬಿಗಿ ಹಿಡಿದು 'ನಿಜವಾ?' ಎಂದು ಕೇಳಿದನು. ಕಲ್ಯಾಣಿ ಮಂಚದ ಮೇಲೆ ಎದ್ದು ಕುಳಿತು ಆ ಸಂಭಾಷಣೆ ಕೇಳುತ್ತಿದ್ದಳು.

'ಆಟೋ ಡ್ರೈವರ್ ಗುರ್ತು ಹಿಡಿದನು. ಅವನ ಫೋಟೋನ ನಿಮಗೆ ವಾಟ್ಸಾಪ್‌ನಲ್ಲಿ ಕಳಿಸುತ್ತಿದ್ದೇನೆ'

ಎರಡು ನಿಮಿಷಗಳ ನಂತರ ಅವನ ಫೋಟೋ ಬಂದಿತು. ಸಣ್ಣ ಗಡ್ಡ, ನಿಸ್ತೇಜವಾದ ಕಣ್ಣುಗಳು, ಒಣಗಿದ ತುಟಿಗಳು, ವಯಸ್ಸು ಸಣ್ಣದಾದರೂ ಮೂವತ್ತು ದಾಟಿದವನ ಹಾಗೆ ಕಾಣುತ್ತಿದ್ದನು. ವಯಸ್ಸಿಗೆ ಮೊದಲೆ ನರೆತ ತಲೆಗೂದಲು, ನೋಡಿದ ಕೂಡಲೆ ಒಳ್ಳೆ ಅಭಿಪ್ರಾಯ ಬರಿಸದ ಮುಖ.

'ಈ ಬ್ಯಾಂಕ್ ಆಫೀಸರ್ ಹೆಂಡತಿ ಟೆಸ್ಟ್‌ಗೆ